

**ಮದುವೆ ನಂತರದ ಕೆಲವು ವರ್ಷಗಳಲ್ಲಿ 'ಮ್ಯಾರಿ ಹಬ್ಬ'ದ ದಿನವನ್ನು ಶಂಕ್ರಿಯೂ ಮರೆಯುತ್ತಿದ್ದ, ಮರೆತಿದ್ದಕ್ಕೆ ಗಂಡನನ್ನು ಬೈಯುವುದನ್ನು ಸುಮಿಯೂ ಮರೆಯುತ್ತಿದ್ದಳು. ಹೀಗಿದ್ದ ಇವರ ದಾಂಪತ್ಯ ಮೂವತ್ತನೇ ವರ್ಷಕ್ಕೆ ಕಾಲಿಟ್ಟಿತ್ತು. ಈ ಬಾರಿ ವಿವಾಹ ವಾರ್ಷಿಕೋತ್ಸವವನ್ನು ಅದ್ದೂರಿಯಾಗಿ ಮಾಡಿಕೊಳ್ಳಬೇಕೆಂದು ಹೊರಟ ಶಂಕ್ರಿ–ಸುಮಿ ದಂಪತಿಯ ಪ್ರಸಂಗ ಸ್ವಾರಸ್ಯಕರ...**

ಉದುರಿ, ತಲೆ ನಡುಗುವ ಕಾಲದಲ್ಲಿ ಆ್ಯನಿವರ್ಸರಿ ಆನಂದ ಕೊಡುವುದಿಲ್ಲ' ಎಂದಳು.

'ಇಷ್ಟು ವರ್ಷ ತನ್ನೊಂದಿಗೆ ಕಷ್ಟಸುಖ ಹಂಚಿಕೊಂಡು, ಹೆಣಗಿ, ಗೋಣಗಿ ಬಾಳಿಕೊಂಡಿರುವ ಹೆಂಡ್ತಿ ಆಸೆ ಪೂರೈಸಬೇಕು' ಎಂದುಕೊಂಡ ಶಂಕ್ರಿ, 'ಇತ್ತೀಚೆಗೆ ನಮ್ಮ ಫ್ಯಾಮಿಲಿಯಲ್ಲಿ ಯಾವುದೇ ಕಾರ್ಯಕ್ರಮ ಮಾಡಿಲ್ಲ, ಆ್ಯನಿವರ್ಸರಿ ಆಚರಿಸೋಣ' ಅಂದ. ಹೆಂಡ್ತಿ, ಮಕ್ಕಳು ಖುಷಿಯಾದರು.

'ಆ್ಯನಿವರ್ಸರಿಗೆ ಸಿಂಪಲ್ಲಾದ ಸೀರೆ ಸಾಕು. ಮದ್ವೆ ಸೀರೆ ಈಗಲೂ ಚೆನ್ನಾಗೇ ಇದೆ, ಅದನ್ನೇ ಉಟ್ಟುಕೊಂಡರಾಯ್ತು, ನೀವೂ ಅಷ್ಟೇ, ಷರ್ಟ್–ಪ್ಯಾಂಟ್ ಹೊಲಿಸಿಕೊಳ್ಳಿ. ಅದರ ಮೇಲೆ ಮದುವೆ ಕೋಟು ಹಾಕಿಕೊಳ್ಳಿ. ಮದುವೆಯಲ್ಲಿ ಹಾಕಿ ಬಿಚ್ಚಿಟ್ಟಿದ್ದ ಕೋಟನ್ನು ಇನ್ನ್ಯಾವತ್ತೂ ಹಾಕಿಲ್ಲ' ಅಂದಳು ಸುಮಿ.

'ಹಾಗೆಲ್ಲಾ ಮಾಡಲಾಗಲ್ಲ. ಹೊಸ ಸೀರೆ, ಬಟ್ಟೆ ಬೇಕು, ಇಷ್ಟು ವರ್ಷ ನನ್ನ ಜೊತೆ ಕಷ್ಟಸುಖ ಹಂಚಿಕೊಂಡು ಬಾಳಿದ್ದೀಯಾ, ನಿನಗೊಂದು ಒಡವೆ ಕೊಡಿಸದಿದ್ದರೆ ಹೇಗೆ?' ಶಂಕ್ರಿ ಹೇಳಿದ.

'ವೆಡ್ಡಿಂಗ್ ಆ್ಯನಿವರ್ಸರಿ ಆಚರಣೆಗೆ ಹತ್ತಿರದವರನ್ನು ಕರೆಯದೇ ಇರಲಾಗುತ್ತಾ?' ಸುಮಿ ಪ್ರಸ್ತಾಪ ಮಾಡಿದಳು.

'ಕರೆಯಲೇಬೇಕು, ನಮ್ಮ ಮನೆಯಲ್ಲಿ ಫಂಕ್ಷನ್ ಮಾಡಿ ಜಾಸ್ತಿ ವರ್ಷಗಳೇ ಆಗಿವೆ'.

ಯಾರು ಯಾರನ್ನು ಆಹ್ವಾನಿಸಬೇಕು ಎಂದು ಸುಮಿ ಮಕ್ಕಳ ಜೊತೆ ಸೇರಿ ಪಟ್ಟಿ ತಯಾರಿಸಲು ರೆಡಿಯಾದಳು. ಅವರನ್ನು ಕರೆಯದೇ ಬಿಡಲಾಗಲ್ಲ, ಇವರನ್ನು ಕರೆಯದೇ ಇರಲಾಗಲ್ಲ ಅಂತ ನೆಂಟರು–ಇಷ್ಟರು, ಹತ್ತಿರದವರು, ಆಪ್ತರು ಅಂತ ದೊಡ್ಡ ಪಟ್ಟಿ ಸಿದ್ಧವಾಯ್ತು. ಇಷ್ಟೊಂದು ಜನ ಬಂದರೆ ಫಂಕ್ಷನ್ ಮಾಡಲು ನಮ್ಮ ಮನೆಯಲ್ಲಿ ಜಾಗ ಸಾಕಾಗಲ್ಲ, ಕಲ್ಯಾಣ ಮಂಟಪವನ್ನೇ ಬುಕ್ ಮಾಡಬೇಕಾಗುತ್ತದೆ' ಅಂದಳು ಸುಮಿ.

'ಬುಕ್ ಮಾಡೋಣ ಬಿಡು... ನಮ್ಮನ್ನು ಹರಸಲು ಬಂದವರಿಗೆಲ್ಲಾ ಒಳ್ಳೆ ಊಟದ ವ್ಯವಸ್ಥೆ ಮಾಡಿ ತಾಂಬೂಲ ಕೊಡೋಣ' ಶಂಕ್ರಿ ಉತ್ಸಾಹ ತೋರಿದ.

'ಬಂದವರು ಮುಯ್ಯಿ ಕೊಡದೇ ಇರ್ತಾರಾ? ಕೊಟ್ಟೇ ಕೊಡ್ತಾರೆ. ಅರ್ಧ ಫಂಕ್ಷನ್ ಖರ್ಚು ಅದರಲ್ಲೇ ಆಗುತ್ತದೆ, ಧಾರಾಳವಾಗಿ ಮುಯ್ಯಿ ಕೊಟ್ಟರೆ, ಆ್ಯನಿವರ್ಸರಿ ಖರ್ಚು ಕಳೆದು ಉಳಿತಾಯವೂ ಆಗಬಹುದು!' ಸುಮಿಗೆ ಸಡಗರ.

'ಆದರೆ, ನಾವಿಬ್ಬರು ವಧುವರರಂತೆ ಅಲಂಕಾರ ಮಾಡಿಕೊಂಡು ವೇದಿಕೆ ಮೇಲಿದ್ದರೆ ಬಂದವರನ್ನು ಬರಮಾಡಿಕೊಳ್ಳೋರು, ಅವರಿಗೆ ಬೇಕಾದ ವ್ಯವಸ್ಥೆ ಮಾಡೋರು ಯಾರು? ಆ ಜವಾಬ್ದಾರಿ ನಿಭಾಯಿಸಲು ಮಕ್ಕಳಿಂದ ಸಾಧ್ಯನಾ?' ಶಂಕ್ರಿಗೆ ಚಿಂತೆಯಾಯಿತು.

'ಡೋಂಟ್ ವರಿ ಡ್ಯಾಡಿ, ಇದನ್ನೆಲ್ಲಾ ಮಾಡಲು ಈವೆಂಟ್ ಮ್ಯಾನೇಜ್‌ಮೆಂಟ್‌ನವರಿದ್ದಾರೆ, ಅವರು ಎಲ್ಲವನ್ನೂ ನೋಡಿಕೊಳ್ತಾರೆ. ಅವರಿಗೆ ಒಪ್ಪಿಸಿದರೆ ಸಾಕು ನಾವು ನಿರಾಳವಾಗಿರಬಹುದು' ಅಂದರು ಮಕ್ಕಳು.

ಈವೆಂಟ್ ಮ್ಯಾನೇಜ್‌ಮೆಂಟ್‌ನವರು ಬಂದು ಶಂಕ್ರಿ ಕುಟುಂಬದ ಗಾತ್ರ, ಘನತೆ ಅಂದಾಜು ಮಾಡಿಕೊಂಡರು. ಕುಟುಂಬದವರ ನಿರೀಕ್ಷಿಸುವ ಕಾರ್ಯಕ್ರಮದ ಸದ್ದು, ಸಡಗರದ ವಿವರ ಪಡೆದರು.

'ಮೂವತ್ತು ವರ್ಷದ ಹಿಂದೆ ನಡೆದ ನಿಮ್ಮ ಮದುವೆಯನ್ನು ನಾವು ರೀ–ಕ್ರಿಯೇಟ್ ಮಾಡ್ತೀವಿ ಸಾರ್...' ಎಂದು ಹೇಳಿ ಮದುವೆಯ ಫೋಟೊ ಪಡೆದರು. ದಂಪತಿಯನ್ನು ಜೊತೆ ಕೂರಿಸಿ ಮೊಬೈಲ್‌ನಲ್ಲಿ ಫೋಟೊ ತೆಗೆದರು. ಮದುವೆ ಫೋಟೊವನ್ನು ಈಗಿನ ಫೋಟೊ ಜೊತೆ ಹೋಲಿಕೆ ಮಾಡಿ ವ್ಯತ್ಯಾಸ ಗುರುತಿಸಿದರು.

'ನೋಡಿ ಸಾರ್, ಮದುವೆ ಫೋಟೊದಲ್ಲಿ ಮೇಡಂ ತುಂಬಾ ಸಣ್ಣಗಿದ್ದಾರೆ, ಇನೋಸೆಂಟ್ ಫೇಸು, ಮುಖದಲ್ಲಿ ಭಯ, ನಾಚಿಕೆ ಕಾಣ್ತಿದೆ. ನೀವು ಚಿಗುರು ಮೀಸೆಯಲ್ಲಿ ವಿರಾಜಮಾನರಾಗಿ ಮಿಂಚುತ್ತಿದ್ದೀರಿ. ಈಗಿನ ಫೋಟೊದಲ್ಲಿ ತುಂಬಾ ವ್ಯತ್ಯಾಸವಾಗಿದೆ. ಸಂಸಾರದ ಸುಖ ಉಂಡಿರುವ ಮೇಡಂ ಸ್ವಲ್ಪ ದುಂಡಗಾಗಿ ಮುಕ್ಕಾಲು ಫ್ರೇಮ್ ತುಂಬಿದ್ದಾರೆ, ಕಾಲು ಫ್ರೇಮಿನಲ್ಲಿ ನೀವು ಸೇರಿಕೊಂಡಿದ್ದೀರಿ. ನಿಮ್ಮ ತಲೆ ಕೂದಲು ಉದುರಿಹೋಗಿದೆ, ಮುಖ ಬಾಡಿ ಬಸವಳಿದಿದೆ...' ಎಂದು ಫೋಟೊ ದಾಖಲೆಯೊಂದಿಗೆ ಸತ್ಯ ಸಾಬೀತು ಮಾಡಿ ಹೇಳಿದ ಈವೆಂಟ್ ಮ್ಯಾನೇಜ್‌ಮೆಂಟಿನವ, 'ಆದರೂ ಡೋಂಟ್ ವರಿ ಸಾರ್. ಆಗಿರುವ ಲೋಪಗಳನ್ನು ತಿದ್ದಿ ತೀಡಿ ರಿಪೇರಿ ಮಾಡಿ ಮದುವೆಯಲ್ಲಿ ನೀವಿಬ್ಬರೂ ಹೇಗಿದ್ದಿರೋ ಹಾಗೇ ನಾವು ನಿಮಗೆ ಮೇಕಪ್ ಮಾಡ್ತೀವಿ, ವಿಶ್ ಮಾಡಲು ಬಂದವರಿಗೂ ನೀವು ಗುರುತು ಸಿಗದಷ್ಟು ಅಂದವಾಗಿ ಅಲಂಕಾರ ಮಾಡಿ ನವ ವಧುವರರಂತೆ ಸಿದ್ಧಗೊಳಿಸ್ತೀವಿ' ಅಂದ.

ಗಂಡ, ಹೆಂಡ್ತಿಗೆ ಇದಕ್ಕಿಂತ ಆನಂದ ಬೇಕಾ? ಇಷ್ಟು ವರ್ಷದ ಜರ್ನಿಯಲ್ಲಿ ಯಾರೊಬ್ಬರೂ ಇವರ ಲೋಪದೋಷ ರಿಪೇರಿ ಮಾಡ್ತೀವಿ ಅಂತ ಮುಂದೆ ಬಂದಿರಲಿಲ್ಲ.

'ನಿಮ್ಮ ಡ್ರೆಸ್ ಸೆಲೆಕ್ಷನ್, ಮೇಕಪ್, ಮೇಡಂ ಹೇರ್ ಸ್ಟೈಲ್, ಸಾರ್‌ಗೆ ಕಟ್ಟಿಂಗ್–ಶೇವಿಂಗ್ ನಾವೇ ಮಾಡಿ ಹೇರ್ ಡೈ ಹಚ್ಚಿ ಅಂದಗೊಳಿಸ್ತೀವಿ' ಅಂದ ಇನ್ನೊಬ್ಬ. ಇನ್ನಷ್ಟು ಆನಂದವಾಯ್ತು.

'ಸಭಾಂಗಣದ ಡೆಕೊರೇಷನ್, ಊಟದ ಮೆನು, ಬಂದವರಿಗೆ ಫಲ ತಾಂಬೂಲ ವ್ಯವಸ್ಥೆ, ಸಂಗೀತ ಸಂಜೆ ಕಾರ್ಯಕ್ರಮವನ್ನು ನಾವೇ ಡಿಸೈಡ್ ಮಾಡ್ತೀವಿ. ನೀವು ಕಲ್ಯಾಣ ಮಂಟಪಕ್ಕೆ ಕೈ ಬೀಸಿಕೊಂಡು ಬಂದರೆ ಸಾಕು, ನಾವು ಕೈ ಚಾಚಿ ಬರಮಾಡಿಕೊಳ್ತೀವಿ' ಅಂದ ಮತ್ತೊಬ್ಬ. ಮನೆ ಮಂದಿಗೆ ವಿಪರೀತ ಆನಂದವಾಯ್ತು.

'ಆ್ಯನಿವರ್ಸರಿ ಕಾರ್ಯಕ್ರಮದಲ್ಲಿ ದಂಪತಿ ಡ್ಯಾನ್ಸ್ ಮಾಡಬೇಕು ಅನ್ನೋ ಆಸೆ ಇದ್ದರೆ ನಿಮ್ಮಿಬ್ಬರಿಗೂ ನಾವೇ ಡ್ಯಾನ್ಸ್ ಕಲಿಸ್ತೀವಿ, ಫಂಕ್ಷನ್‌ನಲ್ಲಿ ನೀವು ಕುಣಿದು ಕುಪ್ಪಳಿಸಿ ಆನಂದಿಸಬಹುದು' ಅಂದ.

'ಸರಿ ಇಷ್ಟಕ್ಕೆಲ್ಲಾ ಎಷ್ಟು ಖರ್ಚಾಗುತ್ತೆ?' ಶಂಕ್ರಿ ಕೇಳಿದ.

ಲೆಕ್ಕ ಹಾಕಿ ಪಟ್ಟಿ ಕೊಟ್ಟ. ದರಪಟ್ಟಿ ನೋಡಿ ಶಂಕ್ರಿ ಗಾಬರಿಯಾದ. 'ಇಷ್ಟೊಂದು ಖರ್ಚಾಗುತ್ತಾ?... ನಿಮ್ಮ ಪಟ್ಟಿಯ ಮೇಕಪ್ ಖರ್ಚಿಗಿಂತ ಕಡಿಮೆ ದುಡ್ಡಿನಲ್ಲಿ ನಮ್ಮ ಮದ್ವೇನೆ ಮುಗಿದಿತ್ತು ಕಣ್ರೀ...' ಶಂಕ್ರಿ ಗಾಬರಿಯಾದ.

'ಇಷ್ಟೆಲ್ಲಾ ಖರ್ಚು ಮಾಡುವ 'ಹಾನಿ'ವರ್ಸರಿ ನಮಗೆ ಬೇಡ... ಸಾರಿ, ನೀವು ಇನ್ನು ಹೊರಡಬಹುದು...' ಎಂದು ಹೇಳಿ ಈವೆಂಟ್ ಮ್ಯಾನೇಜ್‌ಮೆಂಟ್‌ನವರನ್ನು ಸಾಗಹಾಕಿದ.

ಆ್ಯನಿವರ್ಸರಿ ದಿನ ದೇವಸ್ಥಾನಕ್ಕೆ ಹೋಗಿ ಅರ್ಚನೆ ಮಾಡಿಸಿದರು. ಸಂಜೆ ಮಕ್ಕಳ ಜೊತೆ ಹೋಟೆಲ್‌ನಲ್ಲಿ ಊಟ ಮಾಡಿ, ಸೆಲ್ಫಿ ತಗೊಂಡ್ರು. ಆ ಫೋಟೊವನ್ನು ವಾಟ್ಸ್‌ಆಪ್, ಫೇಸ್‌ಬುಕ್‌ಗೆ ಅಪ್‌ಲೋಡ್ ಮಾಡಿ ಲೈಕ್–ಕಾಮೆಂಟ್ ಎಣಿಸಿಕೊಂಡು ಆನಂದಪಟ್ಟರು.

ಪ್ರತಿಕ್ರಿಯಿಸಿ: feedback@sudha.co.in